# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1111 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವವರು | : | ಮಾನ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 23-02-2024. |

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅನಾಥ, ಪರಿತ್ಯಕ್ತ ಹಾಗೂ ನಿರ್ಗತಿಕ ಮಕ್ಕಳ ಪುನರ್ವಸತಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಸಂಪೂರ್ಣ ಮಾಹಿತಿ ನೀಡುವುದು; | ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರಡಿ ಗುರುತಿಸಲ್ಪಡುವ ಅನಾಥ, ಪರಿತ್ಯಕ್ತ ಹಾಗೂ ನಿರ್ಗತಿಕ ಮಕ್ಕಳ ಪುನರ್ವಸತಿಗಾಗಿ ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಸಹಭಾಗಿತ್ವದೊಂದಿಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>• ಬಾಲಕರ ಮತ್ತು ಬಾಲಕಿಯರ ಬಾಲಮಂದಿರ<br>• ಬುದ್ಧಿಮಾಂದ್ಯ ಬಾಲಕರ ಮತ್ತು ಬಾಲಕಿಯರ ಬಾಲಮಂದಿರ<br>• ಟ್ರಾನ್ಸ್‌ಜೆಂಡರ್ ಬಾಲಕರ ಮತ್ತು ಬಾಲಕಿಯರ ಬಾಲಮಂದಿರ<br>• ಹೆಣ್ಣು ಮಕ್ಕಳ ಅನುಪಾಲನಾ ಗೃಹ<br>• ಗಂಡು ಮಕ್ಕಳ ಅನುಪಾಲನಾ ಗೃಹ<br>• ನಿರ್ಗತಿಕ ಮಕ್ಕಳ ಕುಟೀರ<br>• ಬಾಲಕರ ಮತ್ತು ಬಾಲಕಿಯರ ವೀಕ್ಷಣಾಲಯ<br>• ತೆರೆದ ತಂಗುದಾಣ.<br>• ಮುಖ್ಯಮಂತ್ರಿ ಬಾಲಸೇವಾ ಯೋಜನೆ.<br>• ಪ್ರಾಯೋಜಕತ್ವ ಕಾರ್ಯಕ್ರಮ.<br>• ವಿಶೇಷ ಪಾಲನಾ ಯೋಜನೆ<br>• ಉಪಕಾರ್ ಯೋಜನೆ<br>• ದತ್ತು ಕಾರ್ಯಕ್ರಮ<br>• ಶಿಶುಪಾಲನಾ ಕೇಂದ್ರ<br>• ಮುಖ್ಯಮಂತ್ರಿ ಬಾಲ ಹಿತೈಷಿ<br>ಕೇಂದ್ರ ಸರ್ಕಾರದ ಪಿ.ಎಂ. ಕೇರ್ಸ್ ಫಾರ್ ಚಿಲ್ಡ್ರನ್ಸ್ |
| ಆ) | ಮಕ್ಕಳನ್ನು ಹೊಂದಿರದ ಪಾಲಕರು ಮಕ್ಕಳನ್ನು ದತ್ತು ಪಡೆಯಲು ಅನುಸರಿಸಬೇಕಾದ ಕ್ರಮಗಳೇನು; | ಮಕ್ಕಳನ್ನು ದತ್ತು ಪಡೆಯಲು ಅನುಸರಿಸಬೇಕಾದ ಕ್ರಮಗಳನ್ನು ಅನುಬಂಧ-1 ಲಗತ್ತಿಸಿದೆ. |
| ಇ) | 'ದತ್ತು ಸ್ವೀಕಾರ ಯೋಜನೆ' ಆರಂಭವಾಗಿದಾಗಿನಿಂದ ಈವರೆವಿಗು ಸ್ವದೇಶಿ ಮತ್ತು ವಿದೇಶಿ ಪೋಷಕತ್ವಕ್ಕೆ ಎಷ್ಟು ಮಕ್ಕಳನ್ನು ದತ್ತು ನೀಡಲಾಗಿದೆ; (ವರ್ಷವಾರು, ಬಾಲಕರು ಮತ್ತು ಬಾಲಕಿಯರು ಹಾಗೂ ವಿದೇಶಿ ಆಗಿದ್ದಲ್ಲಿ, ಯಾವ ದೇಶಗಳಿಗೆ ಸೇರಿದ್ದಾರೆಂಬ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು) | ಸ್ವದೇಶಿ ಮತ್ತು ವಿದೇಶಿ ದತ್ತು ನೀಡಲಾದ ಮಾಹಿತಿಯನ್ನು ಅನುಬಂಧ-2 ಲಗತ್ತಿಸಿದೆ. |

<table>
<tr><td>ಈ)</td><td>ರಾಜ್ಯದಲ್ಲಿ ವಿಶೇಷ ದತ್ತು ಸಂಸ್ಥೆಗಳನ್ನು ಎಲ್ಲೆಲ್ಲಿ ತೆರೆಯಲಾಗಿದೆ ಹಾಗೂ ದೇಶದಲ್ಲಿ ಮಕ್ಕಳನ್ನು ದತ್ತು ನೀಡುವಲ್ಲಿ ಕರ್ನಾಟಕ ರಾಜ್ಯದ ಸ್ಥಾನವೇನು;</td><td>ದತ್ತು ನೀಡುವ ಪ್ರಕ್ರಿಯೆಯು ಕೇಂದ್ರ ಸರ್ಕಾರವು ವಿನ್ಯಾಸಗೊಳಿಸಿರುವ CARINGS Portal ಮೂಲಕ ನಡೆಯುತ್ತಿದ್ದು, ಸದರಿ Portal ನಲ್ಲಿ ಕರ್ನಾಟಕ ರಾಜ್ಯದ ಸ್ಥಾನದ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ ಹಾಗೂ ರಾಜ್ಯದಲ್ಲಿ ತೆರೆಯಲಾಗಿರುವ ವಿಶೇಷ ದತ್ತು ಸಂಸ್ಥೆಗಳ ಮಾಹಿತಿಯನ್ನು ಅನುಬಂಧ-3ರಲ್ಲಿ ಲಗತ್ತಿಸಿದೆ.</td></tr>
<tr><td>ಉ)</td><td>ವೈದ್ಯಕೀಯ, ಆಶ್ರಯ, ಪುನರ್ವಸತಿ, ನಿಂದನೆ, ಕಿರುಕುಳ, ದೌರ್ಜನ್ಯ ಹೀಗೆ ರಕ್ಷಣೆ ಮಕ್ಕಳ ರಕ್ಷಣಾ ಯೋಜನೆಯಲ್ಲಿ ಮಕ್ಕಳ ರಕ್ಷಣೆ ಹಾಗೂ ಪುನರ್ವಸತಿಯ ಇತರೆ ಸೇವೆಗಳಿಗಾಗಿ ಕಳೆದ 03 ವರ್ಷಗಳಲ್ಲಿ ಸ್ವೀಕರಿಸಿದ ಒಟ್ಟು ಕರೆಗಳ ಸಂಖ್ಯೆ ಎಷ್ಟು? (ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಕೇಂದ್ರ ಸರ್ಕಾರವು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಡಿ ಸ್ವಯಂ ಸೇವಾ ಸಂಸ್ಥೆಯ ಮೂಲಕ ನಿರ್ವಹಿಸಲಾಗುತ್ತಿದ್ದ, ಉಚಿತ ಮಕ್ಕಳ ಸಹಾಯವಾಣಿ ಸಂಖ್ಯೆ:1098ನ್ನು ಹಿಂಪಡೆದು ಕೇಂದ್ರ ಪುರಸ್ಕೃತ ಯೋಜನೆಯಾಗಿ ದಿನಾಂಕ:01.09.2023 ರಿಂದ ಮಿಷನ್ ವಾತ್ಸಲ್ಯ ಯೋಜನೆಯಡಿ ಮಕ್ಕಳ ಸಹಾಯವಾಣಿ ಸಂಖ್ಯೆಯನ್ನು Emergency Response Support System-112 (ERSS) ಯೊಂದಿಗೆ ವಿಲೀನಗೊಳಿಸಿ 24x7ನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅದರಂತೆ, ರಾಜ್ಯದಾದ್ಯಂತ ಸ್ವೀಕೃತವಾದ ಒಟ್ಟು: 107305 ಕರೆಗಳ ಪೈಕಿ ಪ್ರತ್ಯೇಕವಾಗಿ ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಲು ಸ್ವೀಕೃತವಾದ ಕರೆಗಳ ವಿವರ.
<table>
<tr><th>ವೈದ್ಯಕೀಯ</th><th>ಆಶ್ರಯ</th><th>ಪುನರ್ ವಸತಿ</th><th>ನಿಂದನೆ</th><th>ಕಿರುಕುಳ</th><th>ದೌರ್ಜನ್ಯ</th><th>ಇತರೆ</th></tr>
<tr><td>141</td><td>852</td><td>223</td><td>328</td><td>1526</td><td>2506</td><td>101729</td></tr>
</table></td></tr>
</table>

ಮಮಇ 19 ಮಭಾಬ 2024

**(ಲಕ್ಷ್ಮೀ ಆರ್. ಹೆಬ್ಬಾಳ್ಕರ್)**
ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-907(1111)ಕ್ಕೆ**

# ಅನುಬಂಧ-1

- **ಸ್ವದೇಶಿ ದತ್ತು ಪ್ರಕ್ರಿಯೆ: ಭಾರತೀಯ ದತ್ತು ಪೋಷಕರು ಮಗುವನ್ನು ದತ್ತು ಪಡೆಯಲು ಇರುವ ಪ್ರಕ್ರಿಯೆಗಳು**

- ದತ್ತು ಪೂರ್ವ ಪೋಷಕರಿಂದ ನಿಗದಿಪಡಿಸಿದ ಪೋರ್ಟಲ್ ನಲ್ಲಿ ನೋಂದಣಿ ಮಾಡುವುದು ಮತ್ತು 30 ದಿನಗಳಲ್ಲಿ ಅಗತ್ಯ ದಾಖಲಾತಿಗಳನ್ನು ಅಪ್ಲೋಡ್ ಮಾಡುವುದು (Schedule VI Part-1) ಮತ್ತು ಗೃಹ ಅಧ್ಯಯನ ವರದಿಗಾಗಿ ಹತ್ತಿರದ ವಿಶೇಷ ದತ್ತು ಕೇಂದ್ರವನ್ನು ಆಯ್ಕೆ ಮಾಡಿಕೊಳ್ಳುವುದು.
- ವಿಶೇಷ ದತ್ತು ಕೇಂದ್ರವು 60 ದಿನಗಳೊಳಗೆ ಗೃಹ ಅಧ್ಯಯನ ಕೈಗೊಳ್ಳುವುದು ಮತ್ತು ವಿಶೇಷ ದತ್ತು ಕೇಂದ್ರ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಗೃಹ ಭೇಟಿ ಮಾಡಿದ 3 ದಿನಗಳೊಳಗೆ ನಿಗದಿತ ಪೋರ್ಟಲ್ ನಲ್ಲಿ ಗೃಹ ಅಧ್ಯಯನ ವರದಿಯನ್ನು ಅಪ್ಲೋಡ್ ಮಾಡುವುದು. (Schedule VII)
- ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದಿಂದ ದತ್ತು ಪೂರ್ವ ಪೋಷಕರಿಗೆ ನಿಗದಿಪಡಿಸಿದ ಪೋರ್ಟಲ್ ಮುಖಾಂತರ ಮಗುವಿನ ರೆಫರಲ್ ಮಾಡಲಾಗುವುದು. ಮುಂದಿನ 48 ಗಂಟೆಗಳಲ್ಲಿ ದತ್ತು ಪೂರ್ವ ಪೋಷಕರು ಮಗವನ್ನು ಕಾಯ್ದಿರಿಸುವುದು.
- (ದತ್ತು ಪೂರ್ವ RI/NRI/OCI ಪೋಷಕರು Immediate Placement/ Special Need/7days tab ಮೂಲಕ ಸಹ ಮಗುವನ್ನು ನೇರವಾಗಿ ನಿಗದಿತ ಪೋರ್ಟಲ್ ನಲ್ಲಿ ಕಾಯ್ದಿರಿಸಬಹುದಾಗಿದೆ).
- ವಿಶೇಷ ದತ್ತು ಕೇಂದ್ರ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ದತ್ತು ಸಮಿತಿ ಸಭೆಯನ್ನು ಆಯೋಜಿಸಿ ದತ್ತು ಪೂರ್ವ ಪೋಷಕರು ಮಗುವನ್ನು ದತ್ತು ಪಡೆಯಲು ಅರ್ಹವಿರುವ ಬಗ್ಗೆ ತಿರ್ಮಾನಿಸಲಾಗುವುದು ಮತ್ತು ದತ್ತು ಸಮಿತಿ ಸಭೆಯ ನಡವಳಿಗಳನ್ನು ಸಿದ್ಧಪಡಿಸಲಾಗುವುದು (Schedule XXVII)
- ಮಗುವನ್ನು ರಿಸರ್ವ್ ಮಾಡಿದ 30 ದಿನದೊಳಗಾಗಿ ನಿಗದಿಪಡಿಸಿದ ಪೋರ್ಟಲ್‌ನಲ್ಲಿ ದತ್ತು ಪೂರ್ವ ಪೋಷಕರು ಮಗುವಿಗೆ ಸಂಬಂಧಿಸಿದಂತೆ ಆನ್‌ಲೈನ್‌ನಲ್ಲಿ ಒಪ್ಪಿಗೆ ನೀಡುವುದು. ದತ್ತು ಪೂರ್ವ ಪೋಷಕತ್ವಕ್ಕೆ ಮಗುವನ್ನು ನೀಡಲಾಗುವುದು.(Schedule XVIII)
- ವಿಶೇಷ ದತ್ತು ಸಂಸ್ಥೆಯು ಮಗುವಿನ ದತ್ತು ಆದೇಶಕ್ಕಾಗಿ 5 ದಿನಗಳೊಳಗೆ ಅರ್ಜಿಯನ್ನು ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು 5 ದಿನದೊಳಗೆ ಪರಿಶೀಲಿಸಿ ಜಿಲ್ಲಾ ದಂಡಾಧಿಕಾರಿಯವರಿಗೆ ಸಲ್ಲಿಸುವುದು.(Schedule IX Part-1 Schedule XXVIII)
- ಜಿಲ್ಲಾ ದಂಡಾಧಿಕಾರಿಯವರಿಂದ 60 ದಿನದೊಳಗೆ ದತ್ತು ಆದೇಶ ನೀಡಲಾಗುವುದು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ನಿಗದಿಪಡಿಸಿದ ಪೋರ್ಟಲ್‌ನಲ್ಲಿ ದತ್ತು ಆದೇಶ ಅಪ್ಲೋಡ್ ಮಾಡಲಾಗುವುದು (Schedule XXXIII)
- ಮಗುವನ್ನು ದತ್ತು ನೀಡಿದ ನಂತರದ 2 ವರ್ಷಗಳವರೆಗೆ ದತ್ತು ಮಗುವಿನ ಅನುಸರಣೆಯನ್ನು ಸಂಬಂಧಪಟ್ಟ ವಿಶೇಷ ದತ್ತು ಸಂಸ್ಥೆ/ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಮಾಡಲಾಗುವುದು (Schedule XII)
- **ನಿಗದಿಪಡಿಸಿದ ಪೋರ್ಟಲ್** :CARINGS: Child Adoption Resource Information and Guidance System (**CARINGS**) https://carings.wcd.gov.in

➢ CARA: Central Adoption Resource Authority/ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ **(https://cara.wcd.gov.in)**

- SARA: State Adoption Resource Agency/ ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ
- DM: District Magistrate / ಜಿಲ್ಲಾ ದಂಡಾಧಿಕಾರಿಗಳು
- SAA: Special Adoption Agency /ವಿಶೇಷ ದತ್ತು ಸಂಸ್ಥೆ
- DCPU: District Child Protection Unit/ ಜಿಲ್ಲಾ ಮಕ್ಕಳ ರಕ್ಷಣಾ ಘಟಕ
- PAPs: Prospective Adoptive Parents/ ಸಂಭವನೀಯ ದತ್ತು ಪೋಷಕರು

## ವಿದೇಶಿ ದತ್ತು ಪ್ರಕ್ರಿಯೆ

- ವಿದೇಶಿ ದತ್ತು ಪೂರ್ವ ಪೋಷಕರು ಮಕ್ಕಳನ್ನು ದತ್ತು ಪಡೆಯಲು AFAA/CA/IDM ಇವರನ್ನು ಸಂಪರ್ಕಿಸುವುದು.
- AFAA/CA/IDM ಇವರು ಗೃಹ ಅಧ್ಯಯನ ನಡೆಸಿ ಅರ್ಹ ವಿದೇಶಿ ದತ್ತು ಪೂರ್ವ ಪೋಷಕರನ್ನು (Non-Resident of India (NRI)/Overseas Citizen of India (OCI) ನಿಗದಿಪಡಿಸಿದ ಪೋರ್ಟಲ್‌ನಲ್ಲಿ ಆನ್ಲೈನ್ ರಿಜಿಸ್ಟ್ರೇಷನ್ ಮಾಡಲಾಗುವುದು ಮತ್ತು ಗೃಹ ಅಧ್ಯಯನ ವರದಿಯನ್ನು AFAA/CA/IDM ಸಿದ್ಧಪಡಿಸಲಾಗುವುದು.
- AFAA/CA/IDM ವತಿಯಿಂದ ವಿದೇಶಿ ದತ್ತು ಪೂರ್ವ ಪೋಷಕರ (NRI/OCI) ದಾಖಲಾತಿಗಳನ್ನು ನಿಗದಿಪಡಿಸಿದ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗುವುದು.
- ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದಿಂದ ನಿಗದಿಪಡಿಸಿದ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ವಿದೇಶಿ ದತ್ತು ಪೂರ್ವ ಪೋಷಕರನ್ನು ದತ್ತು ಪ್ರಕ್ರಿಯೆಗೆ ಅನುಮೋದಿಸಲಾಗುವುದು.
- AFAA/CA/IDM ಮೂಲಕ ವಿದೇಶಿ ದತ್ತು ಪೂರ್ವ ಪೋಷಕರಿಗೆ ಮಗುವನ್ನು ಆನ್‌ಲೈನ್‌ನಲ್ಲಿ ರೆಫರಲ್ ಮಾಡಲಾಗುವುದು. (Designated Portal) ) ಮತ್ತು 96 ಗಂಟೆಗಳಲ್ಲಿ ದತ್ತು ಪೂರ್ವ ಪೋಷಕರು ಮಗುವನ್ನು ರಿಸರ್ವ್ ಮಾಡಿಕೊಳ್ಳುವುದು ಮತ್ತು 30 ದಿನಗಳೊಳಗೆ ಮಗುವಿಗೆ ಆನ್‌ಲೈನ್ ನಲ್ಲಿ ಒಪ್ಪಿಗೆ ನೀಡುವುದು (Immediate Placement /Special Needs/ Seven days for RI/NRI/OCI PAPs tab) ನಲ್ಲಿ ದತ್ತು ಪೂರ್ವ ಪೋಷಕರ ಪರವಾಗಿ AFAA/CA/IDM ನೇರವಾಗಿ ಮಗುವನ್ನು ರಿಸರ್ವ್ ಮಾಡಿಕೊಳ್ಳಬಹುದು)
- Article 5/17 Hague Adoption Convention. ರೀತ್ಯಾ ವಿದೇಶಿ ದತ್ತು ಪೂರ್ವ ಪೋಷಕರ ದಾಖಲಾತಿಗಳನ್ನು AFAA/CA/IDM ವತಿಯಿಂದ ನಿಗದಿಪಡಿಸಿದ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗುವುದು
- ನಿಗದಿಪಡಿಸಿದ ಪೋರ್ಟಲ್‌ನಲ್ಲಿ ಅಗತ್ಯ ದಾಖಲಾತಿಗಳನ್ನು ಅಪ್ಲೋಡ್ ಮಾಡಲಾದ 10 ದಿನಗಳೊಳಗೆ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದಿಂದ ಷೆಡ್ಯೂಲ್ X ಅನ್ವಯ ನಿರಾಕ್ಷೇಪಣಾ ಪ್ರಮಾಣ ಪತ್ರ (No Objection Certificate) ನೀಡಲಾಗುವುದು.
- ಸಂಬಂಧಪಟ್ಟ ವಿಶೇಷ ದತ್ತು ಸಂಸ್ಥೆಯು ನಿರಾಕ್ಷೇಪಣಾ ಪ್ರಮಾಣ ಪತ್ರ ಪಡೆದ 5 ದಿನಗಳೊಳಗೆ ದತ್ತು ಪಡೆಯಲು ಅರ್ಜಿ ಸಲ್ಲಿಸುವುದು ಮತ್ತು ಜಿಲ್ಲಾ ಮಕ್ಕಳ ರಕ್ಷಣಾ ಘಟಕವು 5 ದಿನಗಳೊಳಗೆ ಪರಿಶೀಲಿಸಿ (ಷೆಡ್ಯೂಲ್ IX Part-2 ಮತ್ತು ಷೆಡ್ಯೂಲ್ XIX) ರನ್ವಯ ಜಿಲ್ಲಾ ದಂಡಾಧಿಕಾರಿಗಳಿಗೆ ಸಲ್ಲಿಸುವುದು..
- ಷೆಡ್ಯೂಲ್ XXXIII ಅನ್ವಯ ಸಂಬಂಧಪಟ್ಟ ಜಿಲ್ಲಾ ದಂಡಾಧಿಕಾರಿಗಳಿಂದ 60 ದಿನಗೊಳಗೆ ದತ್ತು ಆದೇಶ ನೀಡಲಾಗುವುದು ಮತ್ತು ಜಿಲ್ಲಾ ಮತ್ತು ರಕ್ಷಣಾ ಘಟಕದಿಂದ ನಿಗದಿಪಡಿಸಿದ ಪೋರ್ಟಲ್‌ನಲ್ಲಿ ದತ್ತು ಆದೇಶ ಅಪ್ಲೋಡ್ ಮಾಡಲಾಗುವುದು
- ಷೆಡ್ಯೂಲ್ XI ಅನ್ವಯ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದಿಂದ 3 ದಿನಗಳೊಳಗೆ Conformity Certificate ನೀಡಲಾಗುವುದು.
- Conformity Certificate ಪಡೆದ ನಂತರ ಮಗುವಿನ ಪಾಸ್‌ಪೋರ್ಟ್ ಪಡೆಯಲು ಸಂಬಂಧಪಟ್ಟ ವಿಶೇಷ ದತ್ತು ಸಂಸ್ಥೆ ಪಡೆಯಲು ಕ್ರಮವಹಿಸುವುದು.
- ಮಗುವನ್ನು ದತ್ತು ಪಡೆದ ದಿನದಿಂದ ನಂತರದ 2 ವರ್ಷಗಳವರೆಗೆ ದತ್ತು ಮಗುವಿನ ಅನುಸರಣೆಯನ್ನು ಸಂಬಅಧಪಟ್ಟ AFAA/CA/IDM ಇವರಿಂದ ಮಾಡಲಾಗುವುದು. (ಷೆಡ್ಯೂಲ್ XII)

- **ನಿಗದಿಪಡಿಸಿದ ಪೋರ್ಟಲ್**: CARINGS: Child Adoption Resource Information and Guidance System (CARINGS) https://carings.wcd.gov.in
- CARA: Central Adoption Resource Authority/ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ **(https://cara.wcd.gov.in)**

- SARA: State Adoption Resource Agency/ ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ
- DM: District Magistrate/ ಜಿಲ್ಲಾ ದಂಡಾಧಿಕಾರಿಗಳು
- DCPU: District Child Protection Unit/ ಜಿಲ್ಲಾ ಮಕ್ಕಳ ರಕ್ಷಣಾ ಘಟಕ
- SAA: Special Adoption Agency /ವಿಶೇಷ ದತ್ತು ಸಂಸ್ಥೆ
- PAPs: Prospective Adoptive Parents/ ಸಂಭವನೀಯ ದತ್ತು ಪೋಷಕರು
- NRI: Non-Resident Indian/ ಅನಿವಾಸಿ ಭಾರತೀಯ
- OCI: Overseas Citizen of India/ ಭಾರತದ ಸಾಗರೋತ್ತರ ಪ್ರಜೆ
- AFAA: Authorised Foreign Adoption Agency/ ಅಧಿಕೃತ ವಿದೇಶಿ ದತ್ತು ಸಂಸ್ಥೆ
- CA: Central Authority/ ಕೇಂದ್ರ ಪ್ರಾಧಿಕಾರ
- NOC: No Objection Certificate/ ನಿರಾಕ್ಷೇಪಣಾ ಪ್ರಮಾಣ ಪತ್ರ
- IDM: Indian Diplomatic Mission ಭಾರತೀಯ ರಾಜತಾಂತ್ರಿಕ ಮಿಷನ್
- CARA: Central Adoption Resource Authority **(https://cara.wcd.gov.in)**

## ಮಲಪೋಷಕರ (Step Parent) ದತ್ತು ಪ್ರಕ್ರಿಯೆ

- ಮಲಪೋಷಕರ ಮತ್ತು ಜೈವಿಕ ಪೋಷಕರು (ತಂದೆ/ತಾಯಿ) ಇಬ್ಬರೂ ನಿಗದಿಪಡಿಸಿದ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಂಡು ಅಗತ್ಯ ದಾಖಲಾತಿಗಳನ್ನು ಅಪ್ಲೋಡ್ ಮಾಡುವುದು . (ಷೆಡ್ಯೂಲ್ VI- Part 1 & Part 5)
- ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ದಾಖಲಾತಿಗಳನ್ನು ಪರಿಶೀಲಿಸಿ ನಿಗದಿಪಡಿಸಿದ ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲಾಗುವುದು.
- ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿಯಿಂದ ದಾಖಲಾತಿಗಳನ್ನು ಮರುಪರಿಶೀಲಿಸಿ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ ಇವರಿಗೆ ವರದಿ ಸಲ್ಲಿಸಲಾಗುವುದು.
- ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರದ ವತಿಯಿಂದ ಪೂರ್ವ ಅನುಮೋದಿತ ಪತ್ರ (Pre-Approval Letter) ನೀಡಲಾಗುವುದು.. (ಷೆಡ್ಯೂಲ್ XXV-Format 2)
- ದತ್ತು ಪೂರ್ವ ಪೋಷಕರು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಮೂಲಕ ದತ್ತು ಆದೇಶಕ್ಕಾಗಿ ಅರ್ಜಿಯನ್ನು ಜಿಲ್ಲಾ ದಂಡಾಧಿಕಾರಿಗಳಿಗೆ ಸಲ್ಲಿಸುವುದು (ಷೆಡ್ಯೂಲ್ XXXII)
- ಜಿಲ್ಲಾ ದಂಡಾಧಿಕಾರಿಗಳಿಂದ ಅರ್ಜಿ ಸ್ವೀಕರಿಸಿದ 60 ದಿನಗಳೊಳಗೆ ದತ್ತು ಆದೇಶ ನೀಡಲಾಗುವುದು ಮತ್ತು ಜಿಲ್ಲಾ ಮತ್ತು ರಕ್ಷಣಾ ಘಟಕದಿಂದ ನಿಗದಿಪಡಿಸಿದ ಪೋರ್ಟಲ್ ನಲ್ಲಿ ದತ್ತು ಆದೇಶ ಅಪ್ಲೋಡ್ ಮಾಡಲಾಗುವುದು. (ಷೆಡ್ಯೂಲ್ XXXIII)
- Step Parent: ಮಗುವಿನ ತಂದೆ/ತಾಯಿಯನ್ನು ಮದುವೆಯಾಗಿರುವ ಆದರೆ ಜೈವಿಕ ತಂದೆ/ತಾಯಿ ಆಗಿರದ ಮಲ ಪೋಷಕರು
- Step Parent Adoption: ಗಂಡ/ಹೆಂಡತಿಯ ಮಲ ಮಗುವಿನ ಕಾನೂನು ಬದ್ಧ ಪೋಷಕರಾಗುವುದು.

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-907(1111)ಕ್ಕೆ Annexure-2

ವರ್ಷವಾರು ಸ್ವದೇಶಿ ಹಾಗೂ ವಿದೇಶಿ ದತ್ತು ನೀಡಲಾಗಿರುವ ವಿವರ

| Years | In Country | Inter Country | Total |
|---|---|---|---|
| 2013-2014 | 320 | 13 | 333 |
| 2014-2015 | 411 | 14 | 425 |
| 2015-2016 | 277 | 24 | 301 |
| 2016-2017 | 252 | 23 | 275 |
| 2017-2018 | 294 | 26 | 320 |
| 2018-2019 | 227 | 44 | 271 |
| 2019-2020 | 249 | 24 | 273 |
| 2020-2021 | 223 | 33 | 256 |
| 2021-2022 | 238 | 42 | 280 |
| 2022-2023 | 180 | 37 | 217 |
| 2023-2024 (till 17th February, 2024) | 209 | 15 | 224 |
| Total | 2880 | 295 | 3175 |

ಮೇಲ್ಕಂಡ ಮಾಹಿತಿಯು ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರವು ನಿರ್ವಹಿಸುತ್ತಿರುವ CARINGS Portal ರನ್ವಯವಾಗಿರುತ್ತದೆ.

- **ನಿಗದಿಪಡಿಸಿದ ಪೋರ್ಟಲ್** :**CARINGS:** Child Adoption Resource Information and Guidance System (**CARINGS**) https://carings.wcd.gov.in
- CARA: Central Adoption Resource Authority/ ಕೇಂದ್ರ ದತ್ತು ಸಂಪನ್ಮೂಲ ಪ್ರಾಧಿಕಾರ **(https://cara.wcd.gov.in)**
- SARA: State Adoption Resource Agency/ ರಾಜ್ಯ ದತ್ತು ಸಂಪನ್ಮೂಲ ಏಜೆನ್ಸಿ
- DM: District Magistrate / ಜಿಲ್ಲಾ ದಂಡಾಧಿಕಾರಿಗಳು
- SAA: Special Adoption Agency /ವಿಶೇಷ ದತ್ತು ಸಂಸ್ಥೆ
- DCPU: District Child Protection Unit/ ಜಿಲ್ಲಾ ಮಕ್ಕಳ ರಕ್ಷಣಾ ಘಟಕ
- PAPs: Prospective Adoptive Parents/ ಸಂಭವನೀಯ ದತ್ತು ಪೋಷಕರು

## ಅನುಬಂಧ-3

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-907(1111)ಕ್ಕೆ

## ರಾಜ್ಯದಲ್ಲಿ ತೆರೆದಿರುವ ಒಟ್ಟು ದತ್ತು ಸಂಸ್ಥೆಗಳು

### ಸರ್ಕಾರಿ ವಿಶೇಷ ದತ್ತು ಸಂಸ್ಥೆ

| ಕ್ರ.ಸಂ | ಜಿಲ್ಲೆ | ಸಂಸ್ಥೆಯ ಹೆಸರು |
|---|---|---|
| 1 | ಬೆಂಗಳೂರು ನಗರ | ಸರ್ಕಾರಿ ಶಿಶು ಗೃಹ, ಬೆಂಗಳೂರು(1ನೇ ಘಟಕ) |
| 2 | ಬೆಂಗಳೂರು ನಗರ | ಸರ್ಕಾರಿ ಶಿಶು ಗೃಹ, ಬೆಂಗಳೂರು(2ನೇ ಘಕ) |
| 3 | ಕಲಬುರ್ಗಿ | ಅಮೂಲ್ಯ ಶಿಶುಗ್ರಹ, ಗುಲ್ಬರ್ಗಾ |
| 4 | ಧಾರವಾಡ | ಶಿಶುಗೃಹ,ಹುಬ್ಬಳ್ಳಿ |
| 5 | ಬಳ್ಳಾರಿ | ಶಿಶುಗೃಹ,ಬಳ್ಳಾರಿ |
| 6 | ದಾವಣಗೆರೆ | ಶಿಶುಗೃಹ,ದಾವಣಗೆರೆ |
| 7 | ಕೊಡಗು | ಸರ್ಕಾರಿ ವಿಶೇಷ ದತ್ತು ಸಂಸ್ಥೆ |
| 8 | ಕೋಲಾರ | ಸರ್ಕಾರಿ ವಿಶೇಷ ದತ್ತು ಸಂಸ್ಥೆ |
| 9 | ಮೈಸೂರು | ಸರ್ಕಾರಿ ವಿಶೇಷ ದತ್ತು ಸಂಸ್ಥೆ |
| 10 | ರಾಯಚೂರು | ಸರ್ಕಾರಿ ವಿಶೇಷ ದತ್ತು ಸಂಸ್ಥೆ |
| 11 | ಶಿವಮೊಗ್ಗ | ಸರ್ಕಾರಿ ವಿಶೇಷ ದತ್ತು ಸಂಸ್ಥೆ |
| 12 | ಯಾದಗಿರಿ | ಸರ್ಕಾರಿ ವಿಶೇಷ ದತ್ತು ಸಂಸ್ಥೆ |
| 13 | ಬೆಳಗಾವಿ | ಸರ್ಕಾರಿ ವಿಶೇಷ ದತ್ತು ಸಂಸ್ಥೆ, |
| 14 | ಚಿಕ್ಕಮಗಳೂರು | ಸರ್ಕಾರಿ ವಿಶೇಷ ದತ್ತು ಸಂಸ್ಥೆ, |

### ಸರ್ಕಾರೇತರ ವಿಶೇಷ ದತ್ತು ಸಂಸ್ಥೆ

| ಕ್ರ.ಸಂ | ಜಿಲ್ಲೆ | ಸಂಸ್ಥೆಯ ಹೆಸರು |
|---|---|---|
| 1 | ಬೆಂಗಳೂರು(ಗ್ರಾ) | ಪಒಸ್ಸರ ಟ್ರಸ್ಟ್, ಸೆಂಟ್ ಆನ್ಸ್ ರಸ್ತೆ, ನೆಲಮಂಗಲ |
| 2 | ಬೆಳಗಾಂ | ಸ್ವಾಮಿ ವಿವೇಕಾನಂದ ಸೇವಾ ಪ್ರತಿಷ್ಠಾನ. |
| 3 | ಚಿಕ್ಕಮಗಳೂರು | ಸರ್ವೋದಯ ಸಮಾಜ ಸೇವಾ ಸಂಸ್ಥೆ, |
| 4 | ಉಡುಪಿ | ಶ್ರೀ ಕೃಷ್ಣ ಚಾರಿಟಬಲ್ ಟ್ರಸ್ಟ್, . |
| 5 | ಹಾಸನ | ತವರು ಚಾರಿಟಬಲ್ ಟ್ರಸ್ಟ್, |
| 6 | | ಕಾಮಧೇನು ಸಹಕಾರಿ ವಿದ್ಯಾಶ್ರಮ, |
| 7 | ಗದಗ | ಸೇವಾಭಾರತಿ ಟ್ರಸ್ಟ್, |
| 8 | ಹಾವೇರಿ | ಸ್ಪಂದನ ಅಸೋಸಿಯೇಷನ್, |
| 9 | ಉತ್ತರ ಕನ್ನಡ | ಸಹಾಯ ಟ್ರಸ್ಟ್, ಸಿರಸಿ, |

| | | |
|---|---|---|
| 10 | ಬೀದರ್ | ಹಿರೇಮಠ ಸಂಸ್ಥಾನ ವಿದ್ಯಾಪೀಠ(ಆರ್) ದತ್ತು ಕೇಂದ್ರ |
| 11 | ಮಂಡ್ಯ | ಜನಪದ ಸೇವಾ ಟ್ರಸ್ಟ್, ಮೇಲುಕೋಟೆ, |
| 12 | | ವಿಕಸನ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ, |
| 13 | ಬಾಗಲಕೋಟೆ | ಸರ್ಚ್ ಸಂಸ್ಥೆ, |
| 14 | ದಕ್ಷಿಣ ಕನ್ನಡ | ಶ್ರೀ ರಾಮಕೃಷ್ಣ ಸೇವಾ ಸಮಾಜ, ಪುತ್ತೂರು, |
| 15 | ಬೆಂಗಳೂರು | ಶಿಶುಮಂದಿರ,ಕಿತ್ತಗನೂರು |
| 16 | ಬೆಂಗಳೂರು | ಕೆನರಾ ಬ್ಯಾಂಕ್ ರಿಲೀಫ್ ಅಂಡ್ ವೆಲ್‌ಫೇರ್ ಸೊಸೈಟಿ, (ಮಾತೃ ಛಾಯಾ), |
| 17 | ಕೊಪ್ಪಳ | ಸಿದ್ದೇಶ್ವರ, ವಾತ್ಸಲ್ಯ ದತ್ತು ಕೇಂದ್ರ, |
| 18 | ತುಮಕೂರು | ದಯಾ ಭವನ |
| 19 | ಚಿಕ್ಕಬಳ್ಳಾಪುರ | ಕೆ.ವಿ ಟ್ರಸ್ಟ್ |
| 20 | ವಿಜಯಪುರ | ಸಿದ್ದೇಶ್ವರ, ವಾತ್ಸಲ್ಯ ದತ್ತು ಕೇಂದ್ರ, |
| 21 | ಚಾಮರಾಜನಗರ | ಜೀವನ್ ಜ್ಯೋತಿ ಟ್ರಸ್ಟ್ |
| 22 | ಬೆಂಗಳೂರು ನಗರ | ಸೆಂಟ್ ಮೈಕಲ್ ಹೋಂ |
| 23 | ಬೆಂಗಳೂರು ನಗರ | ಅಮೃತಶಿಶು ನಿವಾಸ |
| 24 | ರಾಮನಗರ | ಪ್ರೀತಿ ನಿಲಯ ಹೋಲಿ ಏಂಜೆಲ್ಸ್ ಕಾರ್ಮೆಟ್ |
| 25 | ಮೈಸೂರು | ಛಾಯಾದೇವಿ ವಿಶೇಷ ದತ್ತು ಸಂಸ್ಥೆ |